ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಕಸಂವಿ/ಜ್ಯೋತಿಷ್ಯ/ಅ.ಕೋ./01/–2025–26 ದಿನಾಂಕ: 14.05.2025

## ಅಧಿಸೂಚನೆ

2025–26ನೇ ಸಾಲಿನ ಶೈಕ್ಷಣಿಕ ಅವಧಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಜ್ಯೋತಿಷ ಅಲ್ಪಾವಧಿ ಕೋರ್ಸ್‌ಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆವೇದನಾ ಪತ್ರವನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಕೋರ್ಸ್‌ಗಳ ವಿವರ | ಕೋರ್ಸ್ ಶುಲ್ಕ | ಅರ್ಹತೆ |
|---|---|---|---|
| 1 | ಸಂಕ್ಷಿಪ್ತ ಪಂಚಾಂಗ ಪರಿಚಯ (ಪಂಚಾಂಗ ಎಂದರೇನು? ಉಪಯೋಗಿಸುವ ಕ್ರಮಗಳು) | 1500/– (ಪರೀಕ್ಷಾಶುಲ್ಕ ಪ್ರತ್ಯೇಕ) | 16 ವರ್ಷ ಮೇಲ್ಪಟ್ಟು ಎಲ್ಲರಿಗೂ ಅವಕಾಶ, ಕಲಿಕೆಯಲ್ಲಿ ಆಸಕ್ತಿಯನ್ನು ಹೊಂದಿರುವ ಯಾರು ಬೇಕಾದರೂ ಪ್ರವೇಶಾತಿಯನ್ನು ಪಡೆಯಬಹುದು. |
| 2 | ನವಗ್ರಹಗಳ ಪರಿಚಯ | 1500/– (ಪರೀಕ್ಷಾಶುಲ್ಕ ಪ್ರತ್ಯೇಕ) | 16 ವರ್ಷ ಮೇಲ್ಪಟ್ಟು ಎಲ್ಲರಿಗೂ ಅವಕಾಶ, ಕಲಿಕೆಯಲ್ಲಿ ಆಸಕ್ತಿಯನ್ನು ಹೊಂದಿರುವ ಯಾರು ಬೇಕಾದರೂ ಪ್ರವೇಶಾತಿಯನ್ನು ಪಡೆಯಬಹುದು. |
| 3 | ವಾಸ್ತು ವಿಜ್ಞಾನದ ಸಂಕ್ಷಿಪ್ತ ವಿವರಗಳು | 1500/– (ಪರೀಕ್ಷಾಶುಲ್ಕ ಪ್ರತ್ಯೇಕ) | 16 ವರ್ಷ ಮೇಲ್ಪಟ್ಟು ಎಲ್ಲರಿಗೂ ಅವಕಾಶ, ಕಲಿಕೆಯಲ್ಲಿ ಆಸಕ್ತಿಯನ್ನು ಹೊಂದಿರುವ ಯಾರು ಬೇಕಾದರೂ ಪ್ರವೇಶಾತಿಯನ್ನು ಪಡೆಯಬಹುದು. |

***ವಿದ್ಯಾರ್ಥಿಗಳು ಜ್ಯೋತಿಷ್ಯ ಅಧ್ಯಯನ ಕೇಂದ್ರಗಳಿಗೆ ಆವೇದನ ಪತ್ರ ಸಲ್ಲಿಸಲು ಕೊನೆಯ ದಿನಾಂಕ:14.06.2025.***

***ಜ್ಯೋತಿಷ್ಯ ಅಧ್ಯಯನ ಕೇಂದ್ರಗಳು ವಿಶ್ವವಿದ್ಯಾಲಯಕ್ಕೆ ಆವೇದನ ಪತ್ರ ಸಲ್ಲಿಸಲು ಕೊನೆಯ ದಿನಾಂಕ:19.06.2025.***

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **ಕುಲಸಚಿವರು, ಅಥವಾ ನಿರ್ದೇಶಕರು,** ಅಧ್ಯಯನಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18 ಇವರ ಕಛೇರಿಯನ್ನು **(ದೂ: 080–26705387/26701303)** ಸಂಪರ್ಕಿಸಬಹುದು ಅಥವಾ ವಿಶ್ವವಿದ್ಯಾಲಯದ ಜಾಲತಾಣ **www.ksu.ac.in** ನಲ್ಲಿ ವಿವರಗಳನ್ನು ಪಡೆಯಬಹುದು.

**ಕುಲಸಚಿವರು**

**ಸೂಚನೆಗಳು:**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಅಧ್ಯಯನ ಕೇಂದ್ರಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.
2. ಆಯಾ ಅಧ್ಯಯನ ಕೇಂದ್ರಗಳಿಗೆ ದಾಖಲಾದ ವಿದ್ಯಾರ್ಥಿಗಳ ಕೋರ್ಸ್ ಪ್ರವೇಶಾತಿಯ ಶುಲ್ಕವನ್ನು ವಿದ್ಯಾರ್ಥಿಗಳಿಂದ ಸಂಸ್ಥೆಯವರೇ ಪಡೆದು ಒಟ್ಟು ಮೊತ್ತವನ್ನು ಪ್ರತಿಕೋರ್ಸಿಗೆ ಪ್ರತ್ಯೇಕವಾಗಿ **online payment gateway** ಮೂಲಕ ಪಾವತಿಸಿ ಅರ್ಜಿಯೊಂದಿಗೆ ಶುಲ್ಕವನ್ನು ಪಾವತಿಸಿದ ರಸೀದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

P.T.O

Scanned with OKEN Scanner

3. ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಶುಲ್ಕವನ್ನು ಸಲ್ಲಿಸಿದರೆ ಅದನ್ನು ಮಾನ್ಯ ಮಾಡಲಾಗುವುದಿಲ್ಲ. ತರಗತಿವಾರು ವಿದ್ಯಾರ್ಥಿಗಳ ಮತ್ತು ಕೋರ್ಸ ಪ್ರವೇಶಾತಿಯ ಶುಲ್ಕದ ವಿವರಗಳನ್ನು ಅರ್ಜಿಯಲ್ಲಿ(covering letter) ಸ್ಪಷ್ಟವಾಗಿ ನಮೂದಿಸತಕ್ಕದ್ದು.
4. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
5. ಜನ್ಮ ದಿನಾಂಕದ ದಾಖಲೆಯಾಗಿ ಎಸ್.ಎಸ್.ಎಲ್.ಸಿ ಅಂಕಪಟ್ಟಿ /ಆಧಾರ್ ಕಾರ್ಡ/ ಚುನಾವಣಾ ಗುರುತಿನ ಪತ್ರ ಇತ್ಯಾದಿ ಭಾವಚಿತ್ರಸಹಿತವಾಗಿರುವ ಯಾವುದಾದರೂ ಒಂದರ ನಕಲು ಪ್ರತಿಯನ್ನು ಧೃಢೀಕರಿಸಿ ಅರ್ಜಿಯ ಜೊತೆ ಲಗತ್ತಿಸಬೇಕು.
6. ಪ್ರವೇಶದಾಖಲಾತಿ ಪಟ್ಟಿಯಲ್ಲಿ ನಮೂದಿತವಾಗದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
7. ಪರೀಕ್ಷಾಶುಲ್ಕವನ್ನು ಪರೀಕ್ಷಾ ಅಧಿಸೂಚನೆಯನ್ನು ಹೊರಡಿಸಿದ ಅನಂತರದಲ್ಲಿ ನಿಗದಿಪಡಿಸಿದಂತೆ ಪ್ರತ್ಯೇಕವಾಗಿ ಭರಿಸಬೇಕಾಗುವುದು.
8. ಮಾನ್ಯತೆ ನವೀಕರಣ ಮಾಡಿಕೊಳ್ಳದ ಅಧ್ಯಯನ ಕೇಂದ್ರಗಳ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
9. **ಪಾಠದ ಅವಧಿ:** – 3 ತಿಂಗಳು ಕನಿಷ್ಠ 24 ಗಂಟೆಗಳು / ಅವಧಿಗಳು

**ಪ್ರತಿಗಳು :**

1. ಅಧ್ಯಯನ ಕೇಂದ್ರಗಳ ಪ್ರಾಂಶುಪಾಲರು/ಅಧ್ಯಕ್ಷರು
2. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣ ಹಾಗೂ ಸೂಚನಾ ಫಲಕಗಳು
3. ಮಾನ್ಯಕುಲಪತಿಗಳ ಆಪ್ತ ಶಾಖೆ
4. ಕುಲಸಚಿವರ ಆಪ್ತ ಶಾಖೆ
5. ಹಣಕಾಸು ಅಧಿಕಾರಿಗಳು
6. ಕಛೇರಿ ಪ್ರತಿ

Scanned with OKEN Scanner